# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೬–ಬಿ<br>Part – VI-B | ಬೆಳಗಾವಿ, ಗುರುವಾರ, ೦೯ ಏಪ್ರಿಲ್, ೨೦೨೬ (ಚೈತ್ರ ೧೯, ಶಕ ವರ್ಷ ೧೯೪೮)<br>BELAGAVI, THURSDAY, 09 APRIL, 2026 (CHAITRA 19, SHAKA VARSHA 1948) | ನಂ. ೧೦<br>No. 10 |
|---|---|---|



ಕರ್ನಾಟಕ ಸರ್ಕಾರ

**(ಕಂದಾಯ ಇಲಾಖೆ)**

**ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾದಂಡಾಧಿಕಾರಿಗಳ ಕಛೇರಿ, ವಿಜಯಪುರ**

**Office of the Deputy Commissioner & District Magistrate, Vijayapura**

ದರ್ಬಾರ್‌ಹಾಲ್, ವಿಜಯಪುರ-586101(ಕರ್ನಾಟಕ) | Darbar Hall, Vijayapura - 586101(Karnataka)

Phone No: 08352 - 250021, 250479 | email: deo.bijapur@gmail.com, vijayapurdc@gmail.com


ನಂ:ಚುನಾವಣೆ:ಜಿ.ಪಂ.ತಾ.ಪಂ:ಸಿ.ಆರ್-14/2025-26 ದಿನಾಂಕ:09/04/2026

## ಅಧಿಸೂಚನೆ

ಮಾನ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ:RD 74 LRD 2024 ದಿನಾಂಕ:04/12/2024 ರಡಿ ವಿಜಯಪುರ ಜಿಲೆಯ ತಾಳಿಕೋಟೆ ತಾಲ್ಲೂಕಿನ ಸಾಸನೂರ ಗ್ರಾಮ ಪಂಚಾಯತಿ ವ್ಯಾಪ್ತಿಯ ಶರಣ ಸೋಮನಾಳ ಗ್ರಾಮವನ್ನು ಬಸವನಬಾಗೇವಾಡಿ ತಾಲ್ಲೂಕಿಗೆ ಸೇರ್ಪಡೆಗೊಳಿಸಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

ಮಾನ್ಯ ಸರ್ಕಾರದ ಕಾರ್ಯದರ್ಶಿಗಳು (ಪಂಚಾಯತ್ ರಾಜ್) ಕರ್ನಾಟಕ ಸರ್ಕಾರ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬೆಂಗಳೂರುರವರ ಅರೆ ಸರ್ಕಾರಿ ಪತ್ರ ಸಮ ಸಂಖ್ಯೆ ದಿನಾಂಕ:07.01.2026 ಹಾಗೂ ಮಾನ್ಯ ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 20 ಜಿಪಿಎಸ್ 2026, ದಿನಾಂಕ:06.03.2026 ರನ್ವಯ ತಾಳಿಕೋಟೆ ತಾಲೂಕಿನ ಕ್ಷೇತ್ರ ವ್ಯಾಪ್ತಿಯ ಶರಣ ಸೋಮನಾಳ ಗ್ರಾಮವನ್ನು ಬಸವನ ಬಾಗೇವಾಡಿ ತಾಲೂಕಿನ ವಡವಡಗಿ ಗ್ರಾಮ ಪಂಚಾಯತಿಗೆ ಸೇರ್ಪಡೆಗೊಳಿಸಿ

ಮರು ವಿಂಗಡಿಸಿ ಕರ್ನಾಟಕ ಗ್ರಾಮಸ್ವರಾಜ್ಯತ್ತು ಪಂಚಾಯತ್ರಾಜ್ ಅಧಿನಿಯಮ 1993 ರ ಪ್ರಕರಣ 4 ರಂತೆ ಅಧಿಸೂಚನೆ ಹೊರಡಿಸಲು ಅನುಮತಿ ನೀಡಿ ನಿರ್ದೇಶಿಸಿದ್ದು ಇರುತ್ತದೆ.

ಸರ್ಕಾರದ ಅ.ಸ.ಪತ್ರ ಸಂ:ಆರ್.ಡಿ.ಪಿ.ಆರ್ 02:ಜಿಪಸ:2026 ದಿನಾಂಕ:26-3-2026 ರ ಮೇರೆಗೆ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳ ಚುನಾವಣೆಗೆ ಸಂಬಂಧಿಸಿದಂತೆ ಕರ್ನಾಟಕ ಉಚ್ಚ ನ್ಯಾಯಾಲಯದ ಪ್ರಕರಣದ ಸಂಖ್ಯೆ: CCC-534/2024 ಗೆ ಸಂಬಂಧಿಸಿದಂತೆ, ದಿನಾಂಕ:17.03.2026ರಂದು ನಡೆದ ವಿಚಾರಣೆಯಲ್ಲಿ ವಿಜಯಪುರ ತಾಲ್ಲೂಕಿನಲ್ಲಿ ಬಸವನ ಬಾಗೇವಾಡಿ, ತಾಳಿಕೋಟೆ, ಸಿಂಧಗಿ ಮತ್ತು ಅಲಮೇಲ ತಾಲ್ಲೂಕುಗಳ ಗಡಿ ಬದಲಾವಣೆಯಿಂದಾಗಿ ಕೆಲವು ಗ್ರಾಮ ಪಂಚಾಯತಿಗಳ ರಚನೆ/ಪುನರ್ ರಚನೆ ಪ್ರಕಾರ್ಯಗಳನ್ನು 04 ವಾರಗಳಲ್ಲಿ ಪೂರ್ಣಗೊಳಿಸುವುದಾಗಿ ಅಫಿಡವಿಟ್‌ನ್ನು ಸಲ್ಲಿಸಲಾಗಿದ್ದು, ಈ ಹಿನ್ನೆಲೆಯಲ್ಲಿ ಈ ಮೇಲೆ ತಿಳಿಸಿದ 04 ತಾಲ್ಲೂಕುಗಳ ಗಡಿ ಬದಲಾವಣೆಯಿಂದಾಗಿ ಬಾಕಿ ಉಳಿದಂತಹ ಗ್ರಾಮಗಳು ಭೌಗೋಳಿಕವಾಗಿ ನಿರಂತರತೆಯನ್ನು ಹೊಂದಿದ್ದಲ್ಲಿ ಅಂತಹ ಗ್ರಾಮಗಳನ್ನು / ಜನವಸತಿ ಪ್ರದೇಶಗಳನ್ನು ಒಗ್ಗೂಡಿಸಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ 4 (1) ರಲ್ಲಿ ನಿಗಧಿಪಡಿಸಿರುವ ಜನಸಂಖ್ಯೆಯನ್ನು ಹೊಂದಿದ್ದರೆ, ಅಂತಹ ಪ್ರದೇಶಗಳನ್ನು ಒಗ್ಗೂಡಿಸಿ ಹೊಸ ಗ್ರಾಮ ಪಂಚಾಯತಿಯನ್ನಾಗಿ ಘೋಷಿಸತಕ್ಕದ್ದು ಎಂದು ತಿಳಿಸಿ, ಜಿಲ್ಲಾಧಿಕಾರಿಗಳು ಪ್ರಕರಣ 4ರಡಿಯಲ್ಲಿ ಹೊಸ ಗ್ರಾಮ ಪಂಚಾಯತಿಯನ್ನು ರಚಿಸುವುದಾಗಲಿ ಅಥವಾ ಪುನರ್ ರಚಿಸುವ ಕುರಿತಂತೆ, ನ್ಯಾಯಾಲಯ ನಿಂದನಾ ಅರ್ಜಿ ಬಾಕಿ ಇರುವುದರಿಂದ, ಸಮಯದ ಅಭಾವದ ಕಾರಣ ಆಕ್ಷೇಪಣೆಗಳನ್ನು 07 ದಿನಗಳಿಗೆ ಸೀಮಿತಗೊಳಿಸಿ ಆಹ್ವಾನಿಸಲು ನಿರ್ದೇಶಿಸಿದ್ದು ಇರುತ್ತದೆ.

ಅದರನ್ವಯ ವಿಜಯಪುರ ಜಿಲ್ಲೆಯ ತಾಳಿಕೋಟೆ ತಾಲ್ಲೂಕಿನ ಗ್ರಾಮ ಪಂಚಾಯಿತಿಗಳನ್ನು ಪುನರ್ ರಚನೆ ಮಾಡಿ ಕರಡು ಅಧಿಸೂಚನೆಯನ್ನು ದಿನಾಂಕ:26.03.2026 ರಂದು ವಿಶೇಷ ರಾಜ್ಯಪತ್ರಿಕೆಯಲ್ಲಿ ಪ್ರಕಟಿಸಿ, ದಿನಾಂಕ:02.04.2026 ರೊಳಗಾಗಿ ಕರಡು ಅಧಿಸೂಚನೆಗೆ ಸಲಹೆ & ಆಕ್ಷೇಪಣೆಗಳು ಇದ್ದಲ್ಲಿ ಜಿಲ್ಲಾಧಿಕಾರಿಗಳ ಕಛೇರಿಗೆ ಸಲ್ಲಿಸಲು ತಿಳಿಸಿ ರಾಜ್ಯಪತ್ರಿಕೆ ಪ್ರತಿಯನ್ನು ಸಾರ್ವಜನಿಕರಿಗೆ ದೊರೆಯುವಂತೆ ಪ್ರಕಟಿಸಲಾಗಿರುತ್ತದೆ.

ಸದರಿ ಕರಡು ಅಧಿಸೂಚನೆಗೆ ಸಂಬಂಧಿಸಿದಂತೆ, ಸಾರ್ವಜನಿಕರಿಂದ ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗಿರುವುದಿಲ್ಲ. ಕಾರಣ ಈ ಕೆಳಗೆ ತಿಳಿಸಿರುವಂತೆ, ತಾಳಿಕೋಟೆ ತಾಲೂಕಿನ ಗ್ರಾಮ ಪಂಚಾಯತಿ ಮರು ವಿಂಗಡಣೆ ಮಾಡಿ ಅಂತಿಮ ಆಧಿಸೂಚನೆಯನ್ನು ಪ್ರಕಟಿಸಲಾಗಿದೆ.

ಕರ್ನಾಟಕ ಗ್ರಾಮ ಸ್ವರಾಜ್ಯತ್ತು ಪಂಚಾಯತ್ರಾಜ್ ಅಧಿನಿಯಮ, 1993 ರಪ್ರಕರಣ 4 ಪ್ರಕರಣದ 1 & 2ನೇ ಉಪ ಪ್ರಕರಣದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ. **ಡಾ|| ಆನಂದ್ ಕೆ. ಭಾ.ಆ.ಸೇ.**

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



**ವಿಜಯಪುರ ಜಿಲ್ಲೆಯ ಜಿಲ್ಲಾಧಿಕಾರಿ** ಆದ ನಾನು ತಾಳಿಕೋಟೆ ತಾಲ್ಲೂಕಿನ ಈ ಕೆಳಕಂಡ ಕೋಷ್ಠಕದ 3ನೇ ಅಂಕಣದಲ್ಲಿ ನಿರ್ದಿಷ್ಟ ಪಡಿಸಿರುವ ಗ್ರಾಮಗಳನ್ನು 2ನೇ ಅಂಕಣದ ಗ್ರಾಮ ಪಂಚಾಯತಿಯ ವ್ಯಾಪ್ತಿಯ ಗ್ರಾಮಗಳೆಂದು ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿದೆ.

**ಕೋಷ್ಟಕ**

**ತಾಲೂಕಿನ ಹೆಸರು: ತಾಳಿಕೋಟೆ**

| ತಾಲೂಕಿನ ಹೆಸರು | ಗ್ರಾಮ ಪಂಚಾಯತಿಯ ಹೆಸರು ಮತ್ತು ಕೇಂದ್ರ ಸ್ಥಾನ | ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಡುವ ಗ್ರಾಮಗಳು |
|---|---|---|
| 1 | 2 | 3 |
| ತಾಳಿಕೋಟೆ | ಸಾಸನೂರ | ಸಾಸನೂರ<br>ಚಬನೂರ |

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ 4ನೇ ಪ್ರಕರಣದ 2ನೇ ಉಪ-ಪ್ರಕರಣದಂತೆ ಈ ಅಧಿಸೂಚನೆಯಿಂದ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ದಿನಾಂಕ: 09-05-2026 ಒಳಗಾಗಿ ಅಂತಹ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಕಾರಣ ಸಹಿತವಾಗಿ ಮಾನ್ಯ ಪ್ರಾಧೇಶಿಕ ಆಯುಕ್ತರು, ಬೆಳಗಾವಿರವರಿಗೆ ಸಲ್ಲಿಸ ಬಹುದಾಗಿದೆಯೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಿದೆ.

**(ಡಾ|| ಆನಂದ್ ಕೆ. ಭಾ.ಆ.ಸೇ)**
**ಜಿಲ್ಲಾಧಿಕಾರಿ**
**ವಿಜಯಪುರ ಜಿಲ್ಲೆ, ವಿಜಯಪುರ**

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಧಾರವಾಡ.
SOMASHEKAR B E